# BIO-DATA

ಹೆಸರು : ಪ್ರೊ. ಅ. ರಾ. ಮಿತ್ರ

(ಅಕ್ಕಿಹೆಬ್ಬಾಳು ರಾಮಣ್ಣ ಮಿತ್ರ)

ವಿಳಾಸ : ಬಿ–6, ಕೆ.ಎಚ್.ಬಿ ಕಾಲೊನಿ, ಪುಟ್ಟೇನಹಳ್ಳಿ,

ಯಲಹಂಕ, ಬೆಂಗಳೂರು– 560064

ದೂರವಾಣಿ– 080–28563956

ಶಿಕ್ಷಣ : ಬಿ.ಎ(ಆನರ್ಸ್) ಹಾಗೂ ಎಂ.ಎ(ಕನ್ನಡ)

ಮೈಸೂರು ವಿಶ್ವವಿದ್ಯಾನಿಲಯ

ವೃತ್ತಿ : ಬೆಂಗಳೂರಿನ ಸೇಂಟ್ ಜೋಸೆಫ್ ಕಾಲೇಜಿನಲ್ಲಿ ಅಧ್ಯಾಪಕರಾಗಿ ವೃತ್ತಿಯ ಆರಂಭ. ನಂತರ ಸರಕಾರಿ ಸೇವೆಗೆ ಸೇರಿ, ಮಡಿಕೇರಿ, ತುಮಕೂರು, ಚೆನ್ನಪಟ್ಟಣದ ಕಾಲೇಜುಗಳಲ್ಲಿ ಕೆಲಸ ಮಾಡಿ, ನಂತರ ಬೆಂಗಳೂರಿನ ಮಹಾರಾಣಿ ಕಲಾ ಕಾಲೇಜಿನಲ್ಲಿ ಪ್ರಾಂಶುಪಾಲರಾಗಿ ನಿವೃತ್ತಿ.

**ಸಾಹಿತ್ಯ: (ಅ): ಪ್ರಮುಖ ಕೃತಿಗಳು**

- ವಚನಕಾರರು ಮತ್ತು ಶಬ್ದಕಲ್ಪ
- ಒಳನೋಟಗಳು
- ಛಂದೋಮಿತ್ರ– ಮೂರು ಮುದ್ರಣಗಳನ್ನು ಕಂಡಿದೆ
- ಕೈಲಾಸಂ
- ನಾನೇಕೆ ಕೊರೆಯುತ್ತೇನೆ
- ಆರತಕ್ಷತೆ

- ಪ್ರೇಮ ನದಿಯ ದಡಗಳಲ್ಲಿ (ಪ್ರಪಂಚದ ಅನೇಕ ಪ್ರಾಂತ, ಭಾಷೆಗಳಲ್ಲಿ ಹೆಸರುವಾಸಿಯಾದ ಜಾನಪದ, ಪ್ರಾಚೀನ ಸಾಹಿತ್ಯದಿಂದ ಆಯ್ದ 21 ಪ್ರಣಯ ಕಥೆಗಳು)
- ಮಹಾಭಾರತ ಪಾತ್ರ ಸಂಗತಿಗಳು (ಮಹಾಭಾರತದ 300ರಕ್ಕೂ ಹೆಚ್ಚು ಪಾತ್ರಗಳ ಪರಿಚಯ, ಮಹಾಭಾರತದಲ್ಲಿ ಉಲ್ಲೇಖಿಸಲಾಗಿರುವ ಹಲವು ವಿಷಯಗಳ ವಿವರಣೆ) ಈ ಪುಸ್ತಕ ಈಗಾಗಲೇ 6 ಮುದ್ರಣಗಳನ್ನು ಕಂಡಿದೆ. ಶ್ರೀ. ಮಾಸ್ತಿ ವೆಂಕಟೇಶ ಅಯ್ಯಂಗಾರ್ ಅವರ ಮೊಮ್ಮಗಳಾದ ವಿ.ವಸಂತಶ್ರೀ ಅವರು ಇದನ್ನು ಇಂಗ್ಲೀಷಿಗೆ ಅನುವಾದ ಮಾಡಿ ಪ್ರಕಟಿಸಿದ್ದಾರೆ.
- ಕವಿಗಳ ಬೆನ್ನೇರಿ
- ಮಿತ್ರಾವಲೋಕನ
- ಸ್ಮರಣೀಯರು
- ಮೇಘದೂತ(ಕನ್ನಡ ಅನುವಾದ)
- ಕುಮಾರವ್ಯಾಸ ಭಾರತ ಕಥಾ ಮಿತ್ರ ( ಕುಮಾರವ್ಯಾಸ ಭಾರತದ ಕಥಾ ರೂಪ) ಈ ಪುಸ್ತಕವನ್ನು ಧರ್ಮಸ್ಥಳದ ಶ್ರೀ ವೀರೇಂದ್ರ ಹೆಗಡೆ ಅವರ ಸಹಾಯದಿಂದ ಪ್ರಕಟಿಸಲಾಗಿದೆ. ರಾಜ ಭವನದಲ್ಲಿ, ಮಾನ್ಯ ರಾಜ್ಯಪಾಲರಿಂದ ಈ ಪುಸ್ತಕ ಬಿಡುಗಡೆಯಾಯಿತು. ಇದೂ ಕೂಡ ಆಗಲೇ 6 ಮುದ್ರಣಗಳನ್ನು ಕಂಡಿದೆ.
- ಅನೇಕ ವಿಶ್ವವಿದ್ಯಾನಿಲಯಗಳಿಗೆ, ಶಾಲಾ ಕಾಲೇಜುಗಳಿಗೆ ವ್ಯಾಕರಣ ಮತ್ತಿತರ ಪಠ್ಯಕ್ರಮ

(ಆ)

ಜನಪ್ರಿಯ ಭಾಷಣಕಾರರು. ಹಳೆಗನ್ನಡ, ನಡುಗನ್ನಡ ಮತ್ತು ಹೊಸಗನ್ನಡದ ಹತ್ತು ಹಲವಾರು ಶ್ರೇಷ್ಠ ಕೃತಿಗಳನ್ನು ರಸವತ್ತಾಗಿ, ಹಾಸ್ಯಮಯವಾಗಿ, ಜನಗಳ ಮನ ಮುಟ್ಟುವಂತೆ ದೇಶದ ಹಲವಾರು ಕಡೆ ಉಪನ್ಯಾಸ ನೀಡಿದ್ದಾರೆ. ಬೆಂಗಳೂರಿನ ಭಾರತೀಯ ವಿದ್ಯಾ ಭವನದಲ್ಲಿ ಕನ್ನಡ ಸಾಹಿತ್ಯದ ಸಮಗ್ರ ಒಳನೋಟವನ್ನು ಬಿಂಬಿಸುವ ನಿಟ್ಟಿನಲ್ಲಿ 100 ಉಪನ್ಯಾಸಗಳನ್ನು ನೀಡಿದ್ದಾರೆ. ಅಲ್ಲದೆ, ಬೆಂಗಳೂರಿನ ಗೋಖಲೆ ಸಾರ್ವಜನಿಕ ಸಂಸ್ಥೆ, ಗಾಂಧಿ ಸಾಹಿತ್ಯ ಸಂಘ , ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ವರ್ಲ್ಡ್ ಕಲ್ಚರ್, ಬಿ.ಎಂ.ಶ್ರೀ ಪ್ರತಿಷ್ಠಾನ, ಇಂಡಿಯನ್ ಇನ್ಸ್ಟಿಟ್ಯೂಟ್ ಆಫ್ ಸೈನ್ಸ್ ನಲ್ಲಿ ಕೂಡ ಹಲವಾರು ಉಪನ್ಯಾಸಗಳನ್ನು ನೀಡಿದ್ದಾರೆ.

(ಇ)

ವಿಜಯಾ ಲೈವ್ ಕ್ಯಾಸೆಟ್ಸ್ ಅವರು ಹೊರತಂದಿರುವ 50 ಧ್ವನಿ ಮುದ್ರಿಕೆಗಳಲ್ಲಿ ಕುಮಾರ ವ್ಯಾಸ ಭಾರತದ ಪ್ರತಿ ಪದ್ಯದ ವ್ಯಾಖ್ಯಾನ.

(ಈ)

- ರಾಜ್ಯದ ಅನೇಕ ಪತ್ರಿಕೆಗಳಲ್ಲಿ ಲೇಖನಗಳನ್ನು ಬರೆದಿದ್ದಾರೆ. ಅಲ್ಲದೆ, ಆಕಾಶವಾಣಿ, ದೂರದರ್ಶನ, ಮತ್ತಿತರ ಖಾಸಗಿ ವಾಹಿನಿಗಳಲ್ಲಿ ಇವರ ಅನೇಕ ಕಾರ್ಯಕ್ರಮಗಳು ಅತ್ಯಂತ ಜನಪ್ರಿಯವಾಗಿವೆ. ಅದರಲ್ಲೂ, ಬೆಂಗಳೂರು ಆಕಾಶವಾಣಿಯಲ್ಲಿ ಪ್ರಸಾರವಾದ ರಾಮಾಯಣ ದರ್ಶನಂ, ಮಂಕುತಿಮ್ಮನ ಕಗ್ಗ ಮತ್ತು ಇತರ ಕಾವ್ಯಗಳಿಗೆ ನೀಡಿದ ವಾಚನ, ನಡೆಸಿಕೊಟ್ಟ ಚಿಂತನ ಕಾರ್ಯಕ್ರಮಗಳು ಅತ್ಯಂತ ಜನಪ್ರಿಯವಾಗಿವೆ. ಹಾಗೆ, ದೂರದರ್ಶನದಲ್ಲಿ ಕೂಡ ನಡೆಸಿಕೊಟ್ಟ ಚಿಂತನ, ಸಂವಾದ ಕಾರ್ಯಕ್ರಮ ಮತ್ತು ಕವಿಗಳ ಪರಿಚಯ, ಕಾವ್ಯಗಳ ವ್ಯಾಖ್ಯಾನ ಮಾಡಿಕೊಟ್ಟ ಕಾರ್ಯಕ್ರಮಗಳು ಅತ್ಯಂತ ಜನಪ್ರಿಯವಾಗಿವೆ.
- ಪ್ರತಿ ವರ್ಷ ಡಿಸೆಂಬರ್ 25ರಂದು ಬೆಂಗಳೂರಿನ ನ್ಯಾಷನಲ್ ಕಾಲೇಜು ಪ್ರಾಂಗಣದಲ್ಲಿ ನಡೆಯುವ 'ಹಾಸ್ಯೋತ್ಸವ' ವನ್ನು ಹುಟ್ಟುಹಾಕಿದ್ದಾರೆ. ಇದು ಜನಪ್ರಿಯಗೊಂಡು, ರಾಜ್ಯದ ಉದ್ದಗಲದಲ್ಲೂ ಅನೇಕ ಹಾಸ್ಯೋತ್ಸವ ಕಾರ್ಯಕ್ರಮಗಳು ಪ್ರಾರಂಭವಾದವು.

(ಉ)

ದೇಶದ ಉದ್ದಗಲದಲ್ಲೂ ಕನ್ನಡ ಸಾಹಿತ್ಯದ ಕುರಿತು ಅನೇಕ ವಿಚಾರ ಗೋಷ್ಠಿಗಳಲ್ಲಿ ವಿದ್ವತ್ ಲೇಖನಗಳನ್ನು ನೀಡಿದ್ದಾರೆ.

(ಊ)

ವಿದೇಶಗಳಲ್ಲಿ:

- ಅಮೆರಿಕನ್ ಪೀಸ್ ಕಾರ್ಪ್ಸ್ ಈ ಕಾರ್ಯಕ್ರಮದಲ್ಲಿ ಹಲವಾರು ಅಮೆರಿಕನ್ನರಿಗೆ ಕನ್ನಡವನ್ನು ಕಲಿಸಿದ್ದಾರೆ.
- ಜೂನ್ 2000(ಮಿಲ್ಲೆನಿಯಮ್ ಮೀಟ್) ಮತ್ತು ಅಕ್ಟೋಬರ್ 2003 ರಲ್ಲಿ ಲಂಡನ್‌ನ ಕನ್ನಡ ಬಳಗದಿಂದ ಆಹ್ವಾನ. ಅಲ್ಲಿನ ಅನೇಕ ಸಂಸ್ಥೆಗಳಲ್ಲಿ ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಕುರಿತು ಭಾಷಣ.
- ಅಮೇರಿಕದಲ್ಲಿ ಅಕ್ಕ ವಿಶ್ವ ಕನ್ನಡ ಸಮ್ಮೇಳನದಲ್ಲಿ ಮುಖ್ಯ ಅತಿಥಿಯಾಗಿ ಅನೇಕ ಉಪನ್ಯಾಸಗಳನ್ನು ನೀಡಿದ್ದಾರೆ– 2004, 2005 ಮತ್ತು 2007.
- ಅಮೇರಿಕದ ಅನೇಕ ಸ್ಥಳಗಳಲ್ಲಿ ಕನ್ನಡ ಭಾಷೆ ಹಾಗೂ ಸಾಹಿತ್ಯವನ್ನು ಕುರಿತ ಉಪನ್ಯಾಸಗಳನ್ನು(ಕನ್ನಡ ಮತ್ತು ಇಂಗ್ಲಿಷ್‌ನಲ್ಲಿ) ನೀಡಿದ್ದಾರೆ.

(ಋ)

- ಅಚಲಭಾರತಿ ಎಂಬ ಸ್ವಯಂ ಸೇವಾ ಸಂಸ್ಥೆಯ ಸ್ಥಾಪಕರಾಗಿದ್ದಾರೆ. ಕನ್ನಡದ ಬಡ ಮಕ್ಕಳಿಗೆ ತಂತ್ರಜ್ಞಾನದ ಮೂಲಕ ಪಾಠವನ್ನು ಹೇಳಿಕೊಡುವ(ಇಂಗ್ಲೀಷ್, ಗಣಿತ, ವಿಜ್ಞಾನ)ಉದ್ದೇಶದಿಂದ ಸ್ಥಾಪಿಸಲಾದ ಈ ಸಂಸ್ಥೆ ಕರ್ನಾಟಕದ 600ಕ್ಕೂ ಹೆಚ್ಚು ಸರಕಾರಿ ಶಾಲೆಗಳಲ್ಲಿ, ಮಕ್ಕಳಿಗೆ ಕಂಪ್ಯೂಟರ್ ಮೂಲಕ ಪಾಠವನ್ನು ಸುಲಭವನ್ನಾಗಿಸಲು ಪ್ರಯತ್ನಿಸುತ್ತಿದೆ.
- ಅಚಲಭಾರತಿ ಅಲ್ಲದೆ, ರಾಜ್ಯದ ಅನೇಕ ಸಂಘ ಸಂಸ್ಥೆಗಳ ಅಧ್ಯಕ್ಷರಾಗಿ ಮತ್ತು ಸಲಹೆಗಾರರಾಗಿ ಕೆಲಸ ಮಾಡುತ್ತಿದ್ದಾರೆ.
- ಬೆಂಗಳೂರಿನಲ್ಲಿರುವ ಪ್ರತಿಷ್ಠಿತ ಸಂಸ್ಥೆ, ಕಲಾ ಮಂದಿರದ ಅಧ್ಯಕ್ಷತೆ.

(ಎ)

ಇತರ:

- ಅನೇಕ ವಿಶ್ವವಿದ್ಯಾನಿಲಯಗಳ, ಕಾಲೇಜುಗಳ ಸಲಹಾ ಸಮಿತಿಯಲ್ಲಿದ್ದು ಅನೇಕ ವರ್ಷಗಳಿಂದ ಪಠ್ಯಕ್ರಮದ ತಯಾರಿಕೆ ಹಾಗೂ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ನಡೆಸಿದ್ದಾರೆ.
- ರೋಟರಿ, ಲಯನ್ಸ್, ಸೆಂಚುರಿ ಕ್ಲಬ್ ಮುಂತಾದ ಸಂಸ್ಥೆಗಳಲ್ಲಿ ಉಪನ್ಯಾಸ ನೀಡಿದ್ದಾರೆ.
- ಕನ್ನಡ–ಕನ್ನಡ– ಇಂಗ್ಲಿಷ್ ನಿಘಂಟಿನ ತಯಾರಿಕಾ ಸಮಿತಿಯ ಸದಸ್ಯರಾಗಿ ಕಾರ್ಯ ನಿರ್ವಹಿಸಿದ್ದಾರೆ.
- ಕನ್ನಡ ಸಾಹಿತ್ಯ ಪರಿಷತ್, ನ್ಯಾಷನಲ್ ಬುಕ್ ಟ್ರಸ್ಟ್ ಮತ್ತು ಹಲವಾರು ಸಾಹಿತ್ಯ ಸಂಸ್ಥೆಗಳ ಜೊತೆಗೂಡಿ ಅನೇಕ ಕಾರ್ಯಕ್ರಮಗಳ ಮುಂದಾಳತ್ವ ವಹಿಸಿದ್ದಾರೆ.
- ಸುಧಾ ವಾರಪತ್ರಿಕೆಯಲ್ಲಿ “ನೀವು ಕೇಳಿದಿರಿ?” ಎಂಬ ಅಂಕಣವನ್ನು “ವೃಶ್ಚಿಕ” ಎನ್ನುವ ಹೆಸರಿನಲ್ಲಿ ಹಲವಾರು ವರ್ಷಗಳ ಕಾಲ ಬರೆದಿದ್ದಾರೆ.

(ಏ)

ದೇಶದ ಉದ್ದಗಲದಿಂದ ಅನೇಕ ಸಂಘ ಸಂಸ್ಥೆಗಳಿಂದ ಹಲವಾರು ಗೌರವ ಪ್ರಶಸ್ತಿ ಸನ್ಮಾನಗಳು ಲಭಿಸಿವೆ. ಅವುಗಳಲ್ಲಿ ಪ್ರಮುಖವಾದವು

- 2010ರಲ್ಲಿ ಮಳವಳ್ಳಿಯಲ್ಲಿ ಜರುಗಿದ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ
- ಕಾವ್ಯಾನಂದ ಪ್ರಶಸ್ತಿ (ಹಿರಿಯ ಕವಿ ಶ್ರೀ ಸಿದ್ಧಯ್ಯ ಪುರಾಣಿಕ ಅವರ ಹೆಸರಿನಲ್ಲಿ ನೀಡಲಾಗುವ ಪ್ರಶಸ್ತಿ) ವಚನಕಾರರು ಮತ್ತು ಶಬ್ದಕಲ್ಪ ಪುಸ್ತಕಕ್ಕಾಗಿ
- ಗೊರೂರು ಪ್ರಶಸ್ತಿ (ಹಿರಿಯ ಲೇಖಕ ಶ್ರೀ ಗೊರೂರು ರಾಮಸ್ವಾಮಿ ಅಯ್ಯಂಗಾರ್ ಅವರ ಹೆಸರಿನಲ್ಲಿ ನೀಡಲಾಗುವ ಪ್ರಶಸ್ತಿ)

- ನಗೆರಾಜ ಪ್ರಶಸ್ತಿ
- ಆಳ್ವ ನುಡಿಸಿರಿ ಪ್ರಶಸ್ತಿ
- ಶಿವರಾಮ ಕಾರಂತ ಪ್ರಶಸ್ತಿ
- ವೆಂಕಟಾಚಲ ಶಾಸ್ತ್ರಿ ವಿದ್ವತ್ ಪ್ರಶಸ್ತಿ
- ಕನ್ನಡ ಸಾಹಿತ್ಯಕ್ಕೆ ಕೊಟ್ಟ ಕೊಡುಗೆಗೆ– ಸಾಹಿತ್ಯ ಅಕಾಡೆಮಿ ಪ್ರಶಸ್ತಿ
- ಕೆಂಪೆಗೌಡ ಪ್ರಶಸ್ತಿ
- ಅನಕೃ ಪ್ರಸಸ್ತಿ

**ಇತರ:**

**ಹೆಂಡತಿ: ಶ್ರೀಮತಿ ಲಲಿತ ಮಿತ್ರ**

**ಮಗ: ಕೀರ್ತಿ ಮಿತ್ರ, ಅಮೆರಿಕದ ಪೋರ್ಟ್‌ಲ್ಯಾಂಡ್ ನಲ್ಲಿ ಸಾಫ್ಟ್‌ವೇರ್ ಇಂಜಿನಿಯರ್**

**ಸೊಸೆ: ಅರ್ಚನ ಶ್ರೀಕಾಂತ್**

**ಮೊಮ್ಮಗಳು– ಆರುಷಿ ಮಿತ್ರ**

**ಮಗಳು: ಸೌಮ್ಯ ಮಿತ್ರ, ಅಚಲಭಾರತಿ ಸಂಸ್ಥೆ**

**ಅಳಿಯ: ಗೌತಮ್ ವಿ ಎಸ್, ಎಂಬಿಎ**